

# ಮಂಜಿನ ಟೋಪಿಯ ಮೌಂಟ್ ಕೀನ್ಯಾ ಅಪೂರ್ವ ನಿಧಿ ಗಾರೆ ಡಾರೆ

ಆಗ ತಾನೆ ರಂಗೋಲಿ ಬಿಡಿಸಿ ಬೇರೆ ಬಣ್ಣ ಹಾಕಲು ಮರೆತು ಬರೀ ಹಸಿರನ್ನೇ ಚೆಲ್ಲಿದ್ದಾರೇನೋ ಎನ್ನುವ ಅನುಭೂತಿ 'ಮೌಂಟ್ ಕೀನ್ಯಾ'ದ ಹಾದಿಯಲ್ಲಿ ಸಾಗುವಾಗ ಉಂಟಾಗುತ್ತದೆ. ಗಾರೆ ಡಾರೆ ಅರಣ್ಯ ಪ್ರದೇಶವಂತೂ ಉತ್ತರ ಕೀನ್ಯಾದ ಒಂದು ಅಪೂರ್ವ ಗುಪ್ತರತ್ನ.

**■ ಡಾ. ಸುಕನ್ಯಾ ಸೂನಗಹಳ್ಳಿ**

ಮುಂಜಾನೆ ಆರರ ಸಮಯ. ಕಾರು ಒಂದೇ ವೇಗದಲ್ಲಿ ಓಡುತ್ತಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಕ್ಯಾಮೆರಾಕ್ಕೆ ಗ್ರಾಸವಾಗಬಲ್ಲ ದೃಶ್ಯಗಳೇನಾದರೂ ಕಾಣಬಹುದೇನೋ ಎಂದು ನಿಟ್ಟಿಸುತ್ತಿದ್ದೆ. ಎಷ್ಟು ದೂರ ಸಾಗಿದರೂ ಬೆಟ್ಟಗುಡ್ಡಗಳ ಶ್ರೇಣಿಗಳು, ಮೋಡ ಕವಿದ ವಾತಾವರಣ, ಎಲ್ಲೆಲ್ಲೂ ಹಚ್ಚ ಹಸಿರು, ನಡುವೆ ಚಹಾ ಮತ್ತು ಕಾಫಿ ತೋಟಗಳು, ತುಂತುರು ಮಳೆ. ಈ ಹಾದಿಯಲ್ಲಿ ಸಾಗುವಾಗ ಕರ್ನಾಟಕದ ಮಂಜಿನ ನಗರಿಯಲ್ಲೋ ಅಥವಾ ಸ್ವರ್ಗದ ನೆಲೆವೀಡಾದ ಮಲೆನಾಡಿನಲ್ಲೋ ಪಯಣ ಮಾಡುತ್ತಿರುವಂತೆ ಭಾಸವಾಗುತ್ತಿತ್ತು. ಆದರೆ, ನಾವು ಪ್ರಯಾಣಿಸುತ್ತಿದ್ದುದು ಕೀನ್ಯಾ ದೇಶದ ನೈರೋಬಿಯಿಂದ ಮೌಂಟ್ ಕೀನ್ಯಾದ ಕಡೆಗೆ.

ಮೌಂಟ್ ಕೀನ್ಯಾದ ಸುತ್ತಲಿನ ಪ್ರದೇಶಗಳು ಹೇಗಿವೆ ಎಂದರೆ, ಯಾರೋ ಆಗ ತಾನೆ ರಂಗೋಲಿ ಬಿಡಿಸಿ ಬೇರೆ ಬಣ್ಣ ಹಾಕಲು ಮರೆತು ಬರೀ ಹಸಿರನ್ನೇ ಚೆಲ್ಲಿದ್ದಾರೇನೋ ಎನ್ನಿಸುತ್ತದೆ. ಧೋ ಎಂದು ಸುರಿಯುವ ಮಳೆಗೆ ಹಕ್ಕಿಗಳು ಬೆಚ್ಚಗೆ ಮುದುಡಿ ಮಲಗಿರುತ್ತವೆ. ಅದೃಷ್ಟವಶಾತ್ ಲೈಕಿಪಿಯಾ ರಾಜ್ಯದ ನಾನ್ಯೂಕಿ ಪಟ್ಟಣ ತಲುಪುವಷ್ಟರಲ್ಲಿ ಮಳೆ ನಿಂತಿತ್ತು. ನಾನ್ಯೂಕಿ ಪಟ್ಟಣವನ್ನು 1907ರಲ್ಲಿ ಕೀನ್ಯಾದ ಆರಂಭದ ದಿನಗಳಲ್ಲಿ ಬ್ರಿಟಿಷ್ ವಸಾಹತುಗಾರರು ಪ್ರಾರಂಭಿಸಿದರು. ಅವರ ವಂಶಸ್ಥರು ಇನ್ನೂ ಈ ಪಟ್ಟಣದಲ್ಲಿ, ಅದರ ಸುತ್ತಲೂ ವಾಸಿಸುತ್ತಿದ್ದಾರೆ. ಆಟದ ಉದ್ಯಾನವನಗಳಿಗೆ, ರಾಂಚ್‌ಗಳಿಗೆ ಮತ್ತು ವನ್ಯಜೀವಿ ಸಂರಕ್ಷಣೆಗೆ ಹೆಸರುವಾಸಿಯಾಗಿರುವ ಈ ಪ್ರದೇಶದ ಮೂಲಕವೇ ಸಮಭಾಜಕ ವೃತ್ತವು ದಕ್ಷಿಣಕ್ಕೆ ಹಾದು ಹೋಗುತ್ತದೆ. ಕೀನ್ಯಾದ ಅತ್ಯಂತ ಪ್ರಸಿದ್ಧ ಹೆಗ್ಗುರುತಾದ ಮೌಂಟ್ ಕೀನ್ಯಾವನ್ನು ಏರಲು ಪ್ರಯತ್ನಿಸುವ ಜನರಿಗೆ ತಳಹದಿ ಇದಾಗಿದೆ.

ನಮ್ಮ ಲಗೇಜುಗಳನ್ನು ನಾನ್ಯೂಕಿ ಪಟ್ಟಣದ ಪೀಕ್ಸ್ ಹೋಟೆಲ್‌ನಲ್ಲಿ ಇಟ್ಟು, ಅಲ್ಲಿಂದ ಮೂಲತಃ ಮುಂಬೈನವದ್ದೇ ಆದ 'ಸ್ಪೈಸ್ ಲಾಂಜ್' ಹೋಟೆಲ್‌ನಲ್ಲಿ ಮಧ್ಯಾಹ್ನದ ಉಪಾಹಾರ ಮುಗಿಸಿ, 20 ಕಿ.ಮೀ. ದೂರವಿದ್ದ ಮೌಂಟ್ ಕೀನ್ಯಾ ವನ್ಯಜೀವಿ ಸಂರಕ್ಷಣೆಯ ಮುಖ್ಯ ದ್ವಾರದ ಬಳಿ